ನಿ-330
ಕ್ರ-65 - ಕಂಪ್ಯೂಟರ್

**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಎಂ.ಕೆ. ಪ್ರಾಣೇಶ್, ಶ್ರೀ ಆಯನೂರು ಮಂಜುನಾಥ್, ಛಲವಾದಿ ಟಿ. ನಾರಾಯಣಸ್ವಾಮಿ, ಕೇಶವ ಪ್ರಸಾದ್ ಎಸ್. ಮತ್ತು ಡಿ.ಎಸ್. ಅರುಣ್ ಇವರುಗಳು ನಿಯಮ 330 ರಡಿಯಲ್ಲಿ ಪ್ರಸ್ತಾಪಿಸಿರುವ ಸೂಚನೆಗೆ ಮಾನ್ಯ ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಕೌಶಲ್ಯಾಭಿವೃದ್ಧಿ ಸಚಿವರ ಹೇಳಿಕೆ**

**ಸೂಚನೆ**

ಕಾಲೇಜು ಗಂಥಪಾಲಕ ಪದನಾಮ ಬದಲಾವಣೆ ಮಾಡುವ ಬಗ್ಗೆ ಕಡತ ಸಂಖ್ಯೆ: ಇಡಿ 188 ಯುಇಸಿ 2017 ಅನ್ನು ಸರ್ಕಾರಕ್ಕೆ ಯಾವುದೇ ಆರ್ಥಿಕ ಹೊರೆ ಇಲ್ಲದೆ ಕೇವಲ ಪದನಾಮ ಬದಲಾವಣೆ ಮಾಡುವ ಪ್ರಸ್ತಾವನೆಯನ್ನು ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ ಹಂತದಲ್ಲಿಯೇ ನಿರ್ಣಯ ತೆಗೆದುಕೊಂಡು ಆದೇಶ ಹೊರಡಿಸಬೇಕಾಗಿತ್ತು. ಆದರೆ, ಈ ಪ್ರಕರಣದ ಕಡತವನ್ನು ವಿನಾಕಾರಣ ಸಿಬ್ಬಂದಿ ಹಾಗೂ ಆಡಳಿತ ಸುಧಾರಣಾ ಇಲಾಖೆಗೆ ಮತ್ತು ಆರ್ಥಿಕ ಇಲಾಖೆಗೆ ಕಳುಹಿಸುವುದರ ಮೂಲಕ ಪ್ರಕರಣವನ್ನು ಮತ್ತಷ್ಟು ಕ್ಲಿಷ್ಟಗೊಳಿಸಿ ಸಮಸ್ಯೆಯನ್ನು ಜೀವಂತವಾಗಿಟ್ಟಿರುವ ವಿಚಾರವಾಗಿ ನಿಯಮ 330 ರಡಿಯಲ್ಲಿ ಸರ್ಕಾರದ ಗಮನ ಸೆಳೆಯ ಬಯಸುತ್ತೇವೆ.

**ಹೇಳಿಕೆ**

ಕಾಲೇಜು ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರಂಥಪಾಲಕರ ಪದನಾಮ ಮತ್ತು ಸೇವಾ ಷರತ್ತುಗಳು 2006 ಮತ್ತು 2016 ರ ಯು.ಜಿ.ಸಿ ವೇತನ ಶ್ರೇಣಿ ನಿಯಮಗಳು ಹಾಗೂ UGC Regulations on Minimum Qualifications for appointment of Teachers and other academic staff and measures from maintenance of standards in Higher Education, 2010 & 2018 Regulations ಮತ್ತು ಸರ್ಕಾರಿ ಆದೇಶ ಸಂಖ್ಯೆ: ಇಡಿ 483 ಯುಎನ್‌ಇ 2017, ದಿನಾಂಕ:16.03.2019 ರ ರಲ್ಲಿನ ಅವಕಾಶಗಳ ಪ್ರಕಾರವೇ ಇರುತ್ತದೆ. ಈ ಹುದ್ದೆಗಳು ಯು.ಜಿ.ಸಿ ವೇತನಶ್ರೇಣಿಯ ಹುದ್ದೆಗಳಾಗಿದ್ದು, ಸದರಿ ಹುದ್ದೆಗಳು ಪದನಾಮಗಳನ್ನು ಬದಲಾಯಿಸಲು ಯು.ಜಿ.ಸಿ ನಿಯಮಗಳಲ್ಲಿ ಅವಕಾಶವಿರುವುದಿಲ್ಲ.

ಸಂಖ್ಯೆ: ಇಡಿ 162 ಯುಇಸಿ 2022

**(ಡಾ: ಅಶ್ವಥ್ ನಾರಾಯಣ ಸಿ.ಎನ್)**
ಉನ್ನತ ಶಿಕ್ಷಣ, ಐಟಿ-ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ,
ವಿದ್ಯುನ್ಮಾನ ಹಾಗೂ ಕೌಶಲ್ಯಾಭಿವೃದ್ಧಿ,
ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು.